ದಾಂಡೇಲಿಯನ್ನು ತಾಲ್ಲೂಕು ಕೇಂದ್ರದ ಪ್ರಸ್ತಾವನೆಯಿಂದ ಕೈಬಿಟ್ಟಿರುವುದು

445 ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ಡಿ.ಎಂ.ನಂಜುಂಡಪ್ಪನವರ ವರದಿಯ ಶಿಫಾರಸ್ಸಿನ ಪ್ರಕಾರ ದಾಂಡೇಲಿಯನ್ನು ಹಿಂದುಳಿದ ಪ್ರದೇಶವೆಂದು ಘೋಷಿಸಿ ತಾಲ್ಲೂಕು ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಆ) ಇತ್ತೀಚೆಗೆ ಶ್ರೀ ಮಹಿಷಿರವರು ಸರ್ಕಾರಕ್ಕೆ ನೀಡಿದ ವರದಿಯಲ್ಲಿ ಪ್ರಸ್ತಾವನೆಯಿಂದ ಕೈಬಿಟ್ಟಿರುವುದು ನಿಜವೇ;

ಇ) ಹಾಗಿದ್ದಲ್ಲಿ, ದಾಂಡೇಲಿಯನ್ನು ಕೈಬಿಡಲು ಕಾರಣಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಡಾ: ಡಿ.ಎಂ.ನಂಜುಂಡಪ್ಪನವರ ವರದಿಯ ಶಿಫಾರಸ್ಸಿನಂತೆ ದಾಂಡೇಲಿಯನ್ನು ಹಿಂದುಳಿದ ಪ್ರದೇಶವನ್ನಾಗಿ ಘೋಷಿಸಿರುವುದಿಲ್ಲ. ಇದನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲು ಯಾವುದೇ ಸಮಿತಿಯ ಶಿಫಾರಸ್ಸು ಮಾಡಿರುವುದಿಲ್ಲ.

ಆ) ಮತ್ತು ಇ) ಶ್ರೀ ಮಹಿಷಿರವರು ತಾಲ್ಲೂಕು ರಚನೆ ಬಗ್ಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ. ತಾಲ್ಲೂಕು ಪುನರ್ ರಚನೆ ಕುರಿತು ಸರ್ಕಾರವು ರಚಿಸಿದ್ದ ಶ್ರೀ ಎಂ.ಬಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿನ ಸಮಿತಿಯು ಇತ್ತೀಚೆಗೆ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ. ಈ ಸಮಿತಿಯು ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳ ಕೆಲವು ಪ್ರದೇಶಗಳನ್ನು ಸೇರಿಸಿ ಹೊಸ ದಾಂಡೇಲಿ ತಾಲ್ಲೂಕನ್ನು ರಚಿಸಬೇಕೆಂಬ ಕೋರಿಕೆಯನ್ನು ಪರಿಶೀಲಿಸಿ ಗಾತ್ರದಲ್ಲಿ ಚಿಕ್ಕದಾಗಿರುವ ಮೇಲಿನ ತಾಲ್ಲೂಕುಗಳನ್ನು ಒಡೆದು ಹೊಸ ತಾಲ್ಲೂಕನ್ನು ರಚಿಸುವ ಅವಶ್ಯಕತೆ ಇರುವುದಿಲ್ಲ ಎಂಬ ಕಾರಣದಿಂದಾಗಿ ಸಮಿತಿಯು ಈ ಕೋರಿಕೆಯನ್ನು ಒಪ್ಪಿರುವುದಿಲ್ಲ.

941 ಶ್ರೀ ಸುನಿಲ್ ವಿ.ಹೆಗಡೆ (ಹಳಿಯಾಳ) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳಿಯಾಳ–ಜೋಯಿಡಾ ತಾಲ್ಲೂಕಿನಲ್ಲಿ ನುರಿತ ಕುಸ್ತಿ ಪಟುಗಳಿದ್ದು ಅವರಿಗೆ ಈಗ ನೀಡುತ್ತಿರುವ ಮಾಸಾಶನದ ಮೊತ್ತ ಎಷ್ಟು;